**ಸತ್ಯಬೋಧ**

# ಬೆಳ್ಳಿ ತಂಬಿಗೆ

ಒಂದು ಊರಲ್ಲಿ ಶಂಕರಪ್ಪ ಎನ್ನುವ ಸಾಹುಕಾರ ಇದ್ದ. ಆತನಿಗೆ ಹಣದ ಮೇಲೆ ಬಹಳ ವ್ಯಾಮೋಹ. ಆತ ಹಣದ ದಾಹಕ್ಕೆ ಬಲಿಯಾಗಿ ಒಮ್ಮೆ ಅವಮಾನ ಅನುಭವಿಸಿದ.

ಒಂದು ಸಲ ಶಂಕರಪ್ಪನ ಮನೆಯ ಪಕ್ಕದಲ್ಲಿಯೇ ವಾಸವಾಗಿದ್ದ ಭರಮಪ್ಪ ಎನ್ನುವವನಿಗೆ ಒಂದು ವಾರದ ಕಾಲ ಜರೂರಾಗಿ ಪಟ್ಟಣಕ್ಕೆ ಹೋಗಬೇಕಾಗಿ ಬಂತು. ಮನೆಯಲ್ಲಿ ಬೆಲೆಬಾಳುವ ವಸ್ತುಗಳೇನೂ ಇರಲಿಲ್ಲ. ಆದರೆ, ವಂಶ ಪಾರಂಪರ್ಯವಾಗಿ ಬಂದ ಒಂದು ಬೆಳ್ಳಿಯ ತಂಬಿಗೆ ಇತ್ತು. ಭರಮಪ್ಪ ಆ ತಂಬಿಗೆಯನ್ನು ಶಂಕರಪ್ಪನ ಕೈಗೆ ಕೊಟ್ಟು, 'ನಿಮ್ಮಲ್ಲಿ ಇರಲಿ. ಊರಿಂದ ಹಿಂದಿರುಗಿದ ನಂತರ ತೆಗೆದುಕೊಳ್ಳುತ್ತೇನೆ' ಎಂದು ಹೇಳಿ ಹೋದ.

ಪಟ್ಟಣದಲ್ಲಿ ತನ್ನ ಕೆಲಸವನ್ನೆಲ್ಲಾ ಮುಗಿಸಿಕೊಂಡ ಭರಮಪ್ಪ ಹುಣ್ಣಿಮೆಯ ದಿನ ವಾಪಸ್ಸು ಬಂದ. ಪ್ರತಿ ಹುಣ್ಣಿಮೆಗೆ ಕಳಶ ಪ್ರತಿಷ್ಠಾಪಿಸಿ ಪೂಜೆ ಮಾಡುವುದು ಅವರ ಮನೆಯ ಪದ್ಧತಿ. ಕಳಶಕ್ಕೆ ತಂಬಿಗೆ ಬೇಕಾಗಿತ್ತು. ಶಂಕರಪ್ಪನ ಮನೆಗೆ ಹೋದ. ಆದರೆ, ಶಂಕರಪ್ಪ, 'ಇದೇನು ಭರಮಪ್ಪ, ತಂಬಿಗೆಯನ್ನು ಮೊನ್ನೆಯೇ ತೆಗೆದುಕೊಂಡು ಹೋದೆಯಲ್ಲ?' ಎಂದ.

ಭರಮಪ್ಪ ಗಾಬರಿಗೊಂಡ. 'ಇಲ್ಲ ಸಾಹುಕಾರರೇ, ಆವತ್ತು ತಂಬಿಗೆ ಕೊಟ್ಟು ಹೋದವನು ಮತ್ತೆ ನಿಮ್ಮ ಮನೆಗೆ ಬರುತ್ತಿರುವುದು ಇದೇ ಮೊದಲು. ನನ್ನ ಬೆಳ್ಳಿಯ ತಂಬಿಗೆ ನಿಮ್ಮ ಬಳಿಯೇ ಇದೆ' ಎಂದ. ಆದರೆ, ಸಾಹುಕಾರನದು ಒಂದೇ ಮಾತು, 'ನಾನು ಕೊಟ್ಟಿದ್ದೇನೆ. ನೀನು ಎಲ್ಲೊ ಇಟ್ಟು ಕಳೆದುಕೊಂಡಿರಬೇಕು' ಎನ್ನುವುದು.

ತಂಬಿಗೆ ತಲೆ ತಲಾಂತರದಿಂದ ಬಂದಿದ್ದು. ಅದೂ ಅಲ್ಲದೆ, ಒಂದು ಕೆಜಿ ತೂಕದ ಬೆಳ್ಳಿ ತಂಬಿಗೆ ಅದು. ಭರಮಪ್ಪ ನಿರ್ವಾಹವಿಲ್ಲದೆ ಊರಿನ ಹಿರಿಯರಾದ ರಾಮಣ್ಣನ ಮನೆಗೆ ಹೋಗಿ ನಡೆದ ಸಮಾಚಾರ ವಿವರಿಸಿದ. ರಾಮಣ್ಣ ಸೂಕ್ಷ್ಮಗ್ರಾಹಿ. ಮಾತು ಮತ್ತು ಮುಖಚರ್ಯೆಯಿಂದಲೇ ಸತ್ಯ ಏನು ಎಂದು ತಿಳಿಯುವ ಅನುಭವಸ್ಥರು.

ಶಂಕರಪ್ಪಗೆ ಹೇಳಿ ಕಳಿಸಿದರು. ಶಂಕರಪ್ಪ ಬಂದ. ಜೊತೆಯಲ್ಲಿ ಮೂರು ಜನರಿದ್ದರು. ಮೂವರೂ, 'ಶಂಕರಪ್ಪ ತಂಬಿಗೆಯನ್ನು ಭರಮಪ್ಪನಿಗೆ ವಾಪಸ್ಸು ಕೊಡುವಾಗ ನಾವೇ ಇದ್ದೆವು' ಎಂದರು. ರಾಮಣ್ಣನಿಗೆ ಇದು ಕಗ್ಗಂಟಾಗಿ ಕಂಡಿತು. 'ಕೊಟ್ಟಿದ್ದಾರೆ' ಎನ್ನುವುದಕ್ಕೆ ಒಂದಲ್ಲ, ಮೂರು ಸಾಕ್ಷಿಗಳಿವೆ. ಇದನ್ನು ಕಡೆಗಣಿಸುವುದು ಹೇಗೆ?' ಎಂದು ಪೇಚಿಗೆ ಸಿಲುಕಿದರು. ಇದೆಲ್ಲವನ್ನೂ ಮನೆಯ ಒಳಗಡೆಯಿಂದಲೇ ಕೇಳುತ್ತಿದ್ದ ರಾಮಣ್ಣನ ಹೆಂಡತಿ ಗಂಡನಿಗೆ ಒಳಗೆ ಬರುವಂತೆ ಸನ್ನೆ ಮಾಡಿದಳು. ಅವರು ಒಳಗೆ ಹೋಗಿ ಒಂದೆರಡು ನಿಮಿಷದಲ್ಲಿ ಹೊರಬಂದು, 'ಭರಮಣ್ಣ, ನೀನು ಮರೆತಿರುವಂತೆ ಕಾಣುತ್ತದೆ. ನೆನಪು ಮಾಡಿಕೊಂಡು ನಾಳೆ ಬಾ. ಶಂಕರಪ್ಪ... ನೀವೂ ನಾಳೆ ಬನ್ನಿ' ಎಂದು ಹೇಳಿದರು.

ಈಗ ಅಲ್ಲಿ ಉಳಿದವರು ಮೂವರು ಸಾಕ್ಷಿಗಳು ಮತ್ತು ರಾಮಣ್ಣ.

ರಾಮಣ್ಣ ಮೂವರಿಗೂ ಕಾಫಿಕೊಟ್ಟು ಅದೂ ಇದೂ ಮಾತಾಡುತ್ತಾ, 'ನೋಡಿ, ಇಂದಿನವರಿಗೆ ಯಾವುದರ ನೆನಪೂ ಇರುವುದಿಲ್ಲ. ನೋಡಿದ್ದು ಹೇಗಿದೆ ಎನ್ನುವುದನ್ನು ಮರೆತು ಬಿಡುತ್ತಾರೆ.